**ಮೂಲ: ಅಮೃತಾ ಪ್ರೀತಮ್**
**ಕನ್ನಡಕ್ಕೆ: ಕರುಣಾಲಕ್ಷ್ಮೀ ಕೆ.ಎಸ್.**

# ಭಾಗ್ಯವತಿ



ಬಹಳ ಒಳ್ಳೆಯ ತಂದೂರಿ ರೋಟಿಗಳು. ಆದರೆ ಸಾಗುವಿಗೆ ಬಾಗಿಸಿದ ತುತ್ತನ್ನು ಬಾಯಿಗೆ ಹಾಕಿಕೊಳ್ಳಲಾಗುತ್ತಿರಲಿಲ್ಲ.

'ಇಷ್ಟೊಂದು ಖಾರ...' ನಾನು ಮತ್ತು ನನ್ನಿಬ್ಬರು ಮಕ್ಕಳು ಖಾರ ತಾಳಲಾರದೆ ಚಡಪಡಿಸಲಾರಂಭಿಸಿದೆವು.

'ಅಮ್ಮಾವರೇ, ಇಲ್ಲಿ ಬಹಳ ಜನ ಜಾಟರು ಬರುತ್ತಿರುತ್ತಾರೆ. ಇಲ್ಲಿ ಮೈಲಿಗೊಂದೇ ಸಾರಾಯಿ ಅಂಗಡಿ ಇರುವುದು. ಈ ಜಾಟರು ಒಂದು ಗುಟುಕು ಕುಡಿದಾಗ ಒಳ್ಳೆಯ ಮಸಾಲೆಯುಕ್ತ ಸಾಗು ಕೇಳುತ್ತಾರೆ' ತಂದೂರೀವಾಲಾ ಹೇಳತೊಡಗಿದ.

'ಇಲ್ಲಿ ಜಾಟರು... ಹೆಂಡ...'

'ಹೌದು ಅಮ್ಮಾವರೇ, ಸಾರಾಯಿಯನ್ನಂತೂ ಎಲ್ಲರೂ ಕುಡಿಯುತ್ತಾರೆ. ಯಾರನ್ನಾದರೂ ಕೊಲೆ ಮಾಡಿ ಬಂದಾಗ ಸ್ವಲ್ಪ ಹೆಚ್ಚೇ ಕುಡಿಯುತ್ತಾರೆ.'

'ಇಲ್ಲಿ ಇಂಥದ್ದೆಲ್ಲ...'

'ಇತ್ತೀಚೆಗೆ ಮೊನ್ನೆಮೊನ್ನೆ ಐದಾರು ಜನ ಬಂದಿದ್ದರು. ಯಾರನ್ನೋ ಕೊಲೆ ಮಾಡಿ ಬಂದಿದ್ದರು. ಚೆನ್ನಾಗಿ ಏರಿಸಿಕೊಂಡಿದ್ದರು. ಇಲ್ಲಿ ಬಂದು ಬಹಳ ಗಲಾಟೆ ಮಾಡಲಾರಂಭಿಸಿದರು. ಅಲ್ಲಿ ನೋಡಿ, ನನ್ನ ಮೂರು ಕುರ್ಚಿಗಳು ಮುರಿದು ಬಿದ್ದಿವೆ. ಭಗವಂತ ಆ ಪೊಲೀಸಿನವರಿಗೆ ಒಳ್ಳೆಯದು ಮಾಡಲಿ. ಬಂದು ಬೇಗ ಹಿಡಿದುಕೊಂಡು ಹೋದರು ಅವರನ್ನು, ಇಲ್ಲದಿದ್ದಲ್ಲಿ ನನ್ನ ಒಲೆಯ ಇಟ್ಟಿಗೆಗಳೂ ಉಳಿಯುತ್ತಿರಲಿಲ್ಲ... ಏನು ಮಾಡುವುದು... ನಮ್ಮ ಹೊಟ್ಟೆಪಾಡು ನಡೆಯುವುದು ಇವರಿಂದಲೇ...'

ಕೌಸಲ್ಯಾ ನದಿ ನೋಡುವ ತವಕ ನನ್ನನ್ನು ಚಂಡೀಗಡದಿಂದ ಈ ಹಳ್ಳಿಗೆ ಕರೆದುಕೊಂಡು ಬಂದಿತ್ತು. ಆದರೆ ತಂದೂರೀವಾಲಾನೊಂದಿಗೆ ಮಾತನಾಡುತ್ತಾ ಮಾತು ಸಾರಾಯಿ ಕಡೆಗೆ ಹೊರಳಿತು ಮತ್ತು ಅಲ್ಲಿಂದ ಕೊಲೆ–ಪಾತಕದ